**<u>ದಿನಾಂಕ 17-06-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀಸವಾಲುಃ ಪ್ರತಿವಾದಿ ಪರ ವಕೀಲರಿಂದಃ-</u>**

1. ವಾದಿ ನನ್ನ ತಮ್ಮ. ಆತ ನೌಕರಿ ಮಾಡುವ ಸಲುವಾಗಿ ಸುಮಾರು ವರ್ಷಗಳಿಂದ ಚೆನ್ನೈನಲ್ಲಿ ವಾಸವಿದ್ದಾನೆ. ನಮ್ಮ ಮನೆಯ ಹಿರಿತನವನ್ನು ನನ್ನ ತಂದೆ ಇರುವವರೆಗೆ ಅವರು ಮಾಡುತ್ತಿದ್ದರು, ಅವರ ನಂತರ ನಾನು ಮಾಡುತ್ತಿದ್ದೇನೆ.

2. ನಿಪಿ-1 ನ್ನು ಶ್ರೀಧರ್ ಮಾಡಿಕೊಟ್ಟಿರುತ್ತಾರೆ. ಅವರು ಎಷ್ಟು ಕೇಸಿಗೆ ಸಂಬಂಧಿಸಿದಂತೆ ಜಿಪಿಎ ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಒಂದು ಕೇಸಿಗೆ ಎನ್ನುತ್ತಾರೆ. ಅದರಲ್ಲಿ ನಾನು & ನನ್ನ ತಮ್ಮ ಇದ್ದೇವೆ. ಸ್ಟಾಂಪನ್ನು ನನ್ನ ತಮ್ಮ ತಂದಿದ್ದನು. ಸ್ಟಾಂಪನ್ನು ಟೈಪಿಸ್ಟ್ ಟೈಪ್ ಮಾಡಿದ್ದರು, ಅವರ ಹೆಸರನ್ನು ಹೇಳಲು ಆಗುವುದಿಲ್ಲ. ಅದನ್ನು ಸಿಂಧನೂರಿನಲ್ಲಿ ಟೈಪ್ ಮಾಡಿದ್ದರು.

3. ಶ್ರೀಧರ್ ನಿಮಗೆ ಜಿಪಿಎ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ವಾದಿ ಯಾವತ್ತೂ ಕರ್ನಾಟಕಕ್ಕೆ ಬಂದೇ ಇಲ್ಲ, ಜಿಪಿಎ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ.

4. ಗೋಪಾಲ ಕೃಷ್ಣ ಹೊಳೆದಂಡಿಯಲ್ಲಿ ಬಾಲಾಜಿ ಕ್ಯಾಂಪಿನಲ್ಲಿ ವಾಸವಿದ್ದಾರೆ. ಪ್ರತಿವಾದಿಗೆ ಸಂಬಂಧಿಸಿದಂತೆ ಎಷ್ಟು ಎಕರೆ ಜಮೀನು ಇದೆ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ, ಅದನ್ನು ನನಗೆ ಹೇಳಲು ಬರುವುದಿಲ್ಲ ಎನ್ನುತ್ತಾರೆ. ಪ್ರತಿವಾದಿ ವ್ಯವಸಾಯ ಮಾಡುತ್ತಾರೆ. ಆತ 100 ಎಕರೆ ಜಮೀನಿನಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸಾಕ್ಷಿಯು ವ್ಯವಸಾಯ ಮಾಡುವುದು ಮಾತ್ರ ನನಗೆ ಗೊತ್ತಿದೆ ಎನ್ನುತ್ತಾರೆ.

5. ನನ್ನದು ನೆಲ್ಲಿನ ಗೋಡಾನ್ ಇಲ್ಲ. ನಿಮ್ಮ ಕುಟುಂಬಕ್ಕೆ ಸಂಬಂಧಿಸಿದ ಗೋಡೋನ್ ಇದೆಯೇ ಎಂದರೆ ಸಾಕ್ಷಿಯು ಕುಟುಂಬ ಬೇರೆ ಆಗುತ್ತದೆ, ನನ್ನದು ಬೇರೆಯಾಗುತ್ತದೆ, ಆದರೆ ಗೋಡಾನ್ ನಮ್ಮ ಕುಟುಂಬಕ್ಕೆ ಇದೆ ಎನ್ನುತ್ತಾರೆ. ಅದು ಮೊದಲು ನನ್ನ ತಂದೆಯ ಹೆಸರಿನಲ್ಲಿತ್ತು, ಅವರ ಮರಣದ ನಂತರ ವಾದಿಯ ಹೆಸರಿಗೆ ಮಾಡಿಸಿದ್ದೇವೆ ಎನ್ನುತ್ತಾರೆ. ಅದರಲ್ಲಿ ಎಷ್ಟು ಚೀಲಗಳನ್ನು ಸ್ಟಾಕ್ ಮಾಡಬಹುದು ಎಂದರೆ ನನಗೆ ಗೊತ್ತಿಲ್ಲ. ಆ ಗೋಡೋನ್‌ನ ಅಳತೆ ನನಗೆ ಗೊತ್ತಿಲ್ಲ. ಸದರಿ ಗೋಡೋನ್ ನಮ್ಮ ಬೂದಿವಾಳ ಕ್ಯಾಂಪಿನಲ್ಲಿದೆ. ಸದರಿ ಗೋಡೋನ್‌ನ ಉಸ್ತುವಾರಿ ನಾನೇ ನೋಡಿಕೊಳ್ಳುತ್ತೇನೆ.

6. ನೀವು ಮತ್ತು ನಿಮ್ಮ ತಮ್ಮ ಪ್ರತಿವಾದಿ ನಿಮಗೆ ಇಷ್ಟು ಹಣ ಕೊಡುವುದು ಇದೆ ಎಂದು ಕಾನೂನು ಬದ್ಧ ನೋಟೀಸು ಕೊಟ್ಟಿರುತ್ತೀರಾ ಎಂದರೆ ಸಾಕ್ಷಿಯು ಹೌದು, ಕೊಟ್ಟಿದ್ದೇವೆ

ಎನ್ನುತ್ತಾರೆ. ನನ್ನ ತಮ್ಮನ ಮಾಹಿತಿಯಂತೆ ನೋಟೀಸನ್ನು ಕೊಟ್ಟಿದ್ದೆವು. ಸದರಿ ನೋಟೀಸಿನ ಪ್ರತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ನೋಟೀಸನ್ನು 2023 ರಲ್ಲಿ ಕಳಿಸಿದ್ದೆ. ಸದರಿ ವಿಚಾರವನ್ನು ವಾದ ಪತ್ರದಲ್ಲಿ ಹೇಳಿದ್ದೇನೆ. ಸದರಿ ನೋಟೀಸು ಪ್ರತಿವಾದಿಗೆ ತಲುಪಿದೆ. ನೋಟೀಸು ತಲುಪಿದ ಬಗ್ಗೆ ಸ್ವೀಕೃತಿ ಪತ್ರವನ್ನು ನಾನು ನೋಡಿರುತ್ತೇನೆ. ಅದನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಸದರಿ ವಿಷಯವನ್ನು ನಿಮ್ಮ ಮುಖ್ಯವಿಚಾರಣೆಯ ಪ್ರಮಾಣಪತ್ರದಲ್ಲಿ ಬರೆಸಿರುತ್ತೀರಾ ಎಂದರೆ ಸಾಕ್ಷಿಯು ಅದನ್ನು ನೋಡದೆ ನಾನು ಹೇಗೆ ಹೇಳಲಿ ಎನ್ನುತ್ತಾರೆ. ನಿಮ್ಮ ಮುಖ್ಯವಿಚಾರಣೆಯ ಪ್ರಮಾಣಪತ್ರಕ್ಕೆ ನಿಮ್ಮ ತಮ್ಮ ಮಾಹಿತಿ ಕೊಟ್ಟಿದ್ದು ಎಂದರೆ ಸಾಕ್ಷಿಯು ನನ್ನ ತಮ್ಮ ಮಾಹಿತಿ ಕೊಟ್ಟಿದ್ದರು ಎನ್ನುತ್ತಾರೆ.

**ಪ್ರತಿವಾದಿಯ ಪರ ವಕೀಲರು ಮುಂದುವರೆದ ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ಸಮಯ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಸಿಂಧನೂರು.**